Misc : 22/2023
RW: 1

(ಇಂದು ದಿನಾಂಕಃ 06-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಎಸ್.ಎ.ಪಿ. ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಹತ್ತನೇ ತರಗತಿ ವರೆಗೆ ಓದಿದ್ದೇನೆ. ಅರ್ಜಿದಾರನಿಗೆ ಹೆಂಡತಿ ಮಕ್ಕಳು ಇದ್ದಾರೆ. ಆತನ ಹೆಂಡತಿ ಮಕ್ಕಳು ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಾ ಬೆಂಗಳೂರಿನಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ್ದ ಅಸಲು ದಾವಾ ನಂಬರ 07/2019 ರ ಬಗ್ಗೆ ಅರ್ಜಿದಾರನಿಗೆ ಮತ್ತು ಆತನ ಹೆಂಡತಿ ಮಕ್ಕಳಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಇ.ಪಿ ನಂಬರ 60/2022 ರ ಬಗ್ಗೆ ಕೂಡ ಅವರಿಗೆ ಗೊತ್ತಿರಲಿಲ್ಲ ಎಂದೆರೆ ಸರಿಯಲ್ಲ. ಶಾಂತವೀರ, ಶಂಕರ ಮತ್ತು ಉಮಾ ಪಾಟೀಲ ರಾಜಿ ಮಾಡುವ ಬಗ್ಗೆ ನನ್ನ ಜೊತೆ ಮಾತುಕತೆಗೆ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ದಾವೆ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ ಎಂದೆರೆ ಸರಿಯಲ್ಲ. ಅರ್ಜಿದಾರನಿಗೆ ಎಲ್ಲಾ ಮಾಹಿತಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರ ದಾವೆ ನಡೆದ ಕಾಲಕ್ಕೆ ಬೆಂಗಳೂರಿನಲ್ಲಿ ವಾಸ ಇದ್ದರು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದಾರೆ ಎಂದು ಹೇಳುತ್ತಾರೆ. ನಾನು ದಾವೆ ಸಲಲ್ಲಿಸಿದ ಕಾಲಕ್ಕೆ ಅರ್ಜಿದಾರ ಚಂದಾಪುರ ದಲ್ಲಿ ವಾಸ ಇದ್ದ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. ನೋಟೀಸು ಜಾರಿ ಮಾಡುವ ನ್ಯಾಯಾಲಯದ ಜಾರಿಕಾರರು ಅರ್ಜಿದಾರ ಮತ್ತು ಆತನ ಮನೆಯವರು ಬೆಂಗಳೂರಿನಲ್ಲಿ ವಾಸ ಇದ್ದಾರೆ ಎಂದು ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಅರ್ಜಿದಾರ

ಮತ್ತು ಆತನ ಕುಟುಂಬದವರು ಬೆಂಗಳೂರಿನಲ್ಲಿ ವಾಸ ಇದ್ದರೂ ಕೂಡ ಸ್ಥಳೀಯ ಸುಳ್ಳು ವಿಳಾಸ ತೋರಿಸಿ ಸುಳ್ಳು ಡಿಕ್ರಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರ ಈ ಅರ್ಜಿ ಸಲ್ಲಿಸುವ ಮುಂಚೆ ಪಟ್ಟಣ ಪಂಚಾಯಿತಿಗೆ ಹೋದಾಗ ಮೊದಲ ಬಾರಿ ಡಿಕ್ರಿ ಬಗ್ಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. ಯಾವುದೇ ವ್ಯಕ್ತಿ ಪ್ರತಿಷ್ಠಿತ ಸಂಘ ಸಂಸ್ಥೆ, ಮತ್ತು ಕಂಪನಿಗಳಲ್ಲಿ ಉದ್ಯೋಗ ಮಾಡುತ್ತಿದ್ದರೆ ಗುರುತಿನ ಚೀಟಿ ನೀಡುತ್ತಾರೆ ಎಂದರೆ ಸರಿ. ಅದೇ ರೀತಿ ವೇತನ ಪ್ರಮಾಣ ಪತ್ರ ನೀಡುತ್ತಾರೆ ಎಂದೆರೆ ಸರಿ. ಗುರುತಿನ ಚೀಟಿಯಲ್ಲಿ ಕಂಪನಿ ಹೆಸರು, ಸ್ಥಳ ಮತ್ತು ಅವಧಿ ಇರುತ್ತದೆ ಎಂದರೆ ಸರಿ. ಅರ್ಜಿದಾರ ಮತ್ತು ಆತನ ಕುಟುಂಬದವರು ಬೆಂಗಳೂರಿನ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವುಗಳನ್ನು ಸುಳ್ಳು ಸೃಷ್ಟಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಯಾವುದೇ ಕಂಪನಿಯ ಹೆಸರಿನಲ್ಲಿ ಸುಳ್ಳು ದಾಖಲಾತಿ ಸೃಷ್ಟಿ ಮಾಡಿದರೆ ಸದರಿ ಕಂಪನಿಯವರು ಕಾನೂನು ಕ್ರಮ ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ  ಬೆಸ್ಕಾಂ ನವರು ಬೆಂಗಳೂರಿನ ಚಂದಾಪೂರದ ವಿಳಾಸಕ್ಕೆ ವಿದ್ಯುತ ಬಿಲ್ಲುಗಳನ್ನು ನೀಡಿದ್ದಾರೆ, ಅವುಗಳನ್ನು ಅರ್ಜಿದಾರ ನ್ಯಾಯಾಲಯೆಕ್ಕೆ ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವುಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಅರ್ಜಿದಾರ ಚಂದಾಪೂರದಿಂದ ಬೆಂಗಳೂರಿಗೆ ಪಡಿತರ ಚಿಟಿ ವರ್ಗಾವಣೆ ಮಾಡಿಸಿಕೊಂಡ ಬಗ್ಗೆ ರಸೀದಿಹಾಜರುಪಡಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವುಗಳನ್ನು ಸುಳ್ಳು ಸೃಷ್ಟಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಅರ್ಜಿದಾರನ ಮಗ ಬೆಂಗಳೂರಿನಲ್ಲಿ ತೀರಿ ಹೋದ ಬಗೆ ಮರಣ ಪ್ರಮಾಣಪತ್ರ ಹಾಜರುಪಡಿಸಿದ್ದಾರೆ ಎಂದರೆ ಸರಿ. ಇದೆಲ್ಲ ಗೊತ್ತಿದ್ದರೂ ಅಸಲುದಾವೆ ಯಲ್ಲಿಅರ್ಜಿದಾರನಿಗೆ ದಿನ ಪತ್ರಿಕೆಯ ಮೂಲಕ ಕಲಬುರಗಿ ಜಿಲ್ಲೆಯಲ್ಲಿ ಪ್ರಚೂರ ಪಡಿಸಿ ಆತನನ್ನು ಏಕ ಪಕ್ಷಿಯ ಆಗುವಂತೆ ಮಾಡಿದ್ದೇನೆ

ಎಂದರೆ ಸರಿಯಲ್ಲ. ಉದಯ ಕಾಲ ದಿನ ಪತ್ರಿಕೆ ಹೈದರಾಬಾದ ಕರ್ನಾಟಕದಲ್ಲಿ ಮಾತ್ರ ಇದ್ದು ಬೆಂಗಳೂರಿನಲ್ಲಿ ಇಲ್ಲ ಎಂದರೆ ಸರಿ. ಬೆಂಗಳೂರಿನಲ್ಲಿ ಪ್ರಸಾರ ಇರುವ ದಿನ ಪತ್ರಿಕೆಯಲ್ಲಿ ನೋಟೀಸು ಪ್ರಕಟಣೆ ನೀಡಿಲ್ಲ ಎಂದರೆ ಸರಿ. ಎರಡೂ ಪ್ರಕರಣಗಳು ಅರ್ಜಿದಾರನ ಗಮನಕ್ಕೆ ಬಂದಿಲ್ಲ ಆತನಿಂದ ಮರೆಮಾಚಿ ಸುಳ್ಳು ಡಿಕ್ರಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.